ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 07-02-1976 --ಪಾರ್ಟ್ - 1.

# *ಅವ್ಯಕ್ತ ಫರಿಶ್ತೆಗಳ ಸಭೆ*

(अव्यक्त फरिश्तों की सभा)

**ಎಲ್ಲಾ ಆತ್ಮರಿಗೆ ಸುಖ, ಶಾಂತಿ, ಶಕ್ತಿಯ ಅಂಜಲಿಯನ್ನು ಕೊಡುವವರು, ವರದಾನವನ್ನು ಕೊಟ್ಟು ತೃಪ್ತಿಪಡಿಸುವವರು, ಜನ್ಮ ಜನ್ಮಗಳ ದಾಹವನ್ನು ತೀರಿಸುವವರು, ಸರ್ವರನ್ನು ಗುರಿಗೆ ಸೇರಿಸುವ ಆತ್ಮಿಕತಂದೆ ಮಾತನಾಡುತ್ತಿದ್ದಾರೆ.**

ಬಾಪ್‌ದಾದಾರವರು ಸದಾ ಹರ್ಷಿತ, ಸದಾ ಅಲ್ಪಕಾಲದ ಆಕರ್ಷಣೆಗಳಿಂದ ದೂರವಿರುವ, ಅವ್ಯಕ್ತ ಫರಿಶ್ತೆಗಳನ್ನು ನೋಡುತ್ತಿದ್ದಾರೆ. ಇದು ಫರಿಶ್ತೆಗಳ ಸಭೆಯಾಗಿದೆ. ಪ್ರತಿಯೊಂದು ಫರಿಶ್ತೆಯ ಪ್ರಕಾಶತೆಯ ಕಿರೀಟವು ನಾಲ್ಕೂಕಡೆಯಲ್ಲಿ ಎಷ್ಟು ಸ್ಪಷ್ಟವಾಗಿ ಕಾಣಿಸುತ್ತಿದೆ ಅರ್ಥಾತ್ ಪ್ರತಿಯೊಂದು ಫರಿಶ್ತೆಯು ಎಲ್ಲಿಯವರೆಗೆ ಪ್ರಕಾಶ ಸ್ವರೂಪ(ಲೈಟ್‌ಹೌಸ್) ಮತ್ತು ಶಕ್ತಿಸ್ವರೂಪ(ಮೈಟ್‌ಹೌಸ್) ಆಗಿದ್ದಾರೆ ಎಂಬುದನ್ನು ಇಂದು ಬಾಪ್‌ದಾದಾರವರು ನೋಡುತ್ತಿದ್ದಾರೆ.

ಹೇಗೆ ಭವಿಷ್ಯ ಸ್ವರ್ಗದ ಪ್ರಪಂಚದಲ್ಲಿ ಎಲ್ಲರೂ ದೇವತೆಗಳೆಂದು ಕರೆಸಿಕೊಳ್ಳುತ್ತಾರೆಯೋ ಹಾಗೆಯೇ ವರ್ತಮಾನ ಸಮಯದ ಸಂಗಮದಲ್ಲಿ ಫರಿಶ್ತೆಯ ಸಮಾನ ಎಲ್ಲರೂ ಆಗುತ್ತಾರೆ ಆದರೆ ನಂಬರ್‌ವಾರ್, ಅಲ್ಲಿ ಹೇಗೆ ಪ್ರತಿಯೊಬ್ಬರೂ ತಮ್ಮ ಸ್ಥಿತಿಯನುಸಾರವಾಗಿ ಸತೋಪ್ರಧಾನರಾಗುತ್ತಾ ರೆಯೋ ಹಾಗೆಯೇ ಇಲ್ಲಿಯೂ ಸಹ ಪ್ರತಿಯೊಂದು ಪುರುಷಾರ್ಥಿ ಫರಿಶ್ತೆಯು ಅವಶ್ಯವಾಗಿ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತದೆ. ಅಂದಮೇಲೆ ಇಂದು ಬಾಪ್‌ದಾದಾರವರು ಪ್ರತಿಯೊಬ್ಬರ ಫಲಿತಾಂಶವನ್ನು ನೋಡುತ್ತಿದ್ದರು ಏಕೆಂದರೆ ಈಗ ಅಂತಿಮ ಅನುಭವದ ಕೋರ್ಸ್ ನಡೆಯುತ್ತಿದೆ. ಅನುಭವದ ಕೋರ್ಸ್‌ನಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವು ಏನೆಂದು ಅನುಭವ ಮಾಡುತ್ತಿದ್ದೀರಿ? ಅಂದಮೇಲೆ ಫಲಿತಾಂಶದಲ್ಲಿ ವಿಶೇಷವಾಗಿ ಎರಡು ಮಾತುಗಳನ್ನು ನೋಡಿದೆವು. ಅವು ಯಾವುವು?

ಪ್ರತಿಯೊಬ್ಬರೂ ಯಾವ ಪೊಸಿಷನ್ (ಸ್ಥಿತಿ)ವರೆಗೆ ತಲುಪಿದ್ದಾರೆ? ಅಪೋಸಿಷನ್(ವಿರೋಧ) ಬಹಳಷ್ಟಿದೆಯೇ ಅಥವಾ ಪೊಸಿಷನ್‌ನ ಸ್ಥಿತಿಯು ಹೆಚ್ಚಿಗೆಯಿದೆಯೇ? ಮತ್ತೊಂದು ಹಳೆಯ ದೇಹ ಮತ್ತು ಹಳೆಯ ಪ್ರಪಂಚದಿಂದ ಸ್ಮೃತಿಯನ್ನು ಎಲ್ಲಿಯವರೆಗೆ ವರ್ಗಾವಣೆ ಮಾಡಿದ್ದೀರಿ? ಜೊತೆಜೊತೆಯಲ್ಲಿ ವರ್ಗಾವಣೆಯ ಆಧಾರದ ಮೇಲೆ ಟ್ರಾನ್ಸ್‌ಪರೆಂಟ್ (ಸ್ವಚ್ಛ) ಎಲ್ಲಿಯವರೆಗೆ ಆಗಿದ್ದೀರಿ? ನಾಲ್ಕೂ ವಿಷಯಗಳಲ್ಲಿ ಎಲ್ಲಿಯವರೆಗೆ ಪ್ರತ್ಯಕ್ಷಸ್ವರೂಪರಾಗಿದ್ದೀರಿ? ಬಾಪ್‌ದಾದಾರವರ ಮೂರೂಸ್ವರೂಪಗಳು- ಸಾಕಾರ, ಆಕಾರ ಮತ್ತು ನಿರಾಕಾರನ ಮೂಲಕ ತೆಗೆದುಕೊಂಡಿರುವ ಪಾಲನೆ ಮತ್ತು ವಿದ್ಯೆಯ ರಿಟರ್ನ್‌ನ್ನು ಎಲ್ಲಿಯವರೆಗೆ ಕೊಟ್ಟಿದ್ದೀರಿ? ಬಾಪ್‌ದಾದಾರವರೊಂದಿಗೆ ಆದಿಯಿಂದ ಈಗಿನವರೆಗೂ ಮಾಡಿರುವ ಪ್ರತಿಜ್ಞೆಗಳೇನಿವೆ, ಅವೆಲ್ಲಾ ಪ್ರತಿಜ್ಞೆಗಳನ್ನು ನಿಭಾಯಿಸುವಂತಹ ಸ್ವರೂಪವು ಎಲ್ಲಿಯವರೆಗೆ ಬಂದಿದೆ? ಲಾಭವೆಷ್ಟಿದೆಯೋ ಅಷ್ಟೂ ತೆಗೆದುಕೊಂಡಿದ್ದೀರಾ? ಪ್ರತಿಯೊಬ್ಬರೂ ಇಂತಹ ಪರಿಶೀಲನೆಯನ್ನು ಮಾಡಿಕೊಂಡಿದ್ದೀರಾ? ನಾಲ್ಕೂ ವಿಷಯಗಳ ಪರಿಶೀಲನೆಯಲ್ಲಿ ಸಹಜ ಸಾಧನವಾದ ತಮಗೆ ಗಾಯನವಾಗಿರುವ ಮಹಿಮೆಯಿಂದ ಸಿದ್ಧವಾಗಿಬಿಡುತ್ತದೆ. ಆ ಮಹಿಮೆಯನ್ನು ತಿಳಿದುಕೊಂಡಿದ್ದೀರಾ? ಆ ಮಹಿಮೆಯು ಯಾವುದಾಗಿದೆ ಅದರಿಂದ ನಾಲ್ಕೂವಿಷಯಗಳ ಫಲಿತಾಂಶವು ಬಂದುಬಿಡುತ್ತದೆ. ಅಂದಮೇಲೆ ಇದೇ ಪರಿಶೀಲನೆಯನ್ನು ಮಾಡಿ- ಈ ನಾಲ್ಕೂಮಾತುಗಳಲ್ಲಿ ಸಂಪನ್ನವಾಗಿದ್ದೀರಾ? ಈಗಿನವರೆಗೆ 16 ಕಲೆಯವರಾಗಿದ್ದೀರಾ ಅಥವಾ 14 ಕಲೆಯವರೆಗೆ ತಲುಪಿದ್ದೀರಾ? ಸರ್ವಗುಣ ಸಂಪನ್ನರಾಗಿದ್ದೀರಾ ಅಥವಾ ಗುಣಸಂಪನ್ನವಾಗಿದ್ದೀರಾ ಅರ್ಥಾತ್ ಕೆಲಕೆಲವು ಗುಣಗಳನ್ನು ಧಾರಣೆ ಮಾಡಿಕೊಂಡಿದ್ದೀರಾ? ಎಲ್ಲಾ ಮರ್ಯಾದೆಗಳನ್ನು ಧಾರಣೆ ಮಾಡಿ ಮರ್ಯಾದಾ ಪುರುಷೋತ್ತಮರಾಗಿದ್ದೀರಾ? ಸಂಪೂರ್ಣ ಅಹಿಂಸಕರಾಗಿದ್ದೀರಾ? ಸಂಕಲ್ಪದ ಮೂಲಕವೂ ಯಾವುದೇ

ಆತ್ಮನಿಗೆ ದುಃಖ ಕೊಡುವ ಅಥವಾ ದುಃಖವನ್ನು ತೆಗೆದುಕೊಳ್ಳುವುದೂ ಸಹ ಹಿಂಸೆಯಾಗಿದೆ. ಸಂಪೂರ್ಣ ಅಹಿಂಸಕ ಅರ್ಥಾತ್ ಶ್ರೇಷ್ಠವಾಗಿರಬೇಕು, ಸಾಧಾರಣರಾಗಿರಬಾರದು, ಲೌಕಿಕವಾಗಿರಬಾರದು ಮತ್ತು ವ್ಯರ್ಥವಾಗಬಾರದು. ಈ ರೀತಿ ಎಲ್ಲಿಯವರೆಗೆ ಆಗಿದ್ದೀರಿ? ಬಾಪ್‌ದಾದಾರವರು ಏನನ್ನು ನೋಡಿದರು? ಈಗಿನವರೆಗೂ ವಿಶೇಷವಾಗಿ ಎರಡು ಶಕ್ತಿಗಳ ಅವಶ್ಯಕತೆಯು ಬಹಳ ಇದೆ. ಅವು ಯಾವುವು?

ಒಂದು ಸ್ವಯಂನ್ನು ಪರಿಶೀಲನೆ ಮಾಡುವ ಶಕ್ತಿಯಾಗಿದೆ, ಇನ್ನೊಂದು ಸ್ವಯಂನ್ನು ಪರಿವರ್ತನೆ ಮಾಡಿಕೊಳ್ಳುವ ಶಕ್ತಿಯಾಗಿದೆ. ಇವೆರಡೂ ಶಕ್ತಿಗಳ ಫಲಿತಾಂಶದಲ್ಲಿ ತೀವ್ರ ಪುರುಷಾರ್ಥಿ, ತೀವ್ರ ಗತಿಯಿಂದ ಮುಂದುವರೆಯಬೇಕೆಂದು ಎಷ್ಟು ಬಯಸುತ್ತಾರೆಯೋ ಅಷ್ಟು ಮುಂದುವರೆಯುವುದಿಲ್ಲ. ಇವೆರಡು ಶಕ್ತಿಗಳ ಕೊರತೆಯ ಕಾರಣದಿಂದಲೇ ಒಂದಲ್ಲ ಒಂದು ಅಡಚಣೆಯು ತೀವ್ರವಾಗಿ ಮಾಡಲು ಬಿಟ್ಟುಕೊಡುವುದಿಲ್ಲ. ಅನ್ಯರನ್ನು ಪರಿಶೀಲನೆ ಮಾಡುವ ಗತಿಯು ತೀವ್ರವಾಗಿರುತ್ತದೆ. ಅನ್ಯರು ಪರಿವರ್ತನೆಯಾಗಬೇಕೆಂಬ ಸಂಕಲ್ಪವು ತೀವ್ರವಾಗಿದೆ. ಇದರಲ್ಲಿ ಮೊದಲು ತಾವು ಎನ್ನುವ ಪಾಠವು ಪಕ್ಕಾ ಆಗಿರುತ್ತದೆ. ಎಲ್ಲಿ ಮೊದಲು ನಾನು ಆಗಬೇಕು ಎನ್ನುವುದಿರಬೇಕೋ ಅಲ್ಲಿ ಮೊದಲು ತಾವು ಎನ್ನುವುದಿದೆ ಮತ್ತು ಎಲ್ಲಿ ಮೊದಲು ತಾವು ಎನ್ನುವುದಿರಬೇಕು ಅಲ್ಲಿ ಮೊದಲು ನಾನು ಎನ್ನುವುದಿದೆ. ಪ್ರತಿಯೊಬ್ಬರ ವರದಾನದಲ್ಲಿ ಮೂರನೆಯ ನೇತ್ರದ ಯಾವ ವರದಾನ ಸಿಕ್ಕಿದೆ ಆ ಮೂರನೆಯ ನೇತ್ರದ ಮೂಲಕ ಯಾವ ಕಾರ್ಯವನ್ನು ಬಾಪ್‌ದಾದಾರವರು ಕೊಟ್ಟಿದ್ದಾರೆ. ಆ ಕಾರ್ಯದಲ್ಲಿಯೇ ತೊಡಗಿರುವುದಿಲ್ಲ. ಆತ್ಮವನ್ನು ನೋಡುವುದಕ್ಕಾಗಿ, ಆತ್ಮದ ಪ್ರಪಂಚವನ್ನು ನೋಡುವುದಕ್ಕಾಗಿ ಅಥವಾ ಹೊಸ ಪ್ರಪಂಚವನ್ನು ನೋಡುವುದಕ್ಕಾಗಿ ಮೂರನೆಯ ನೇತ್ರವನ್ನು ಕೊಡಲಾಗಿದೆ, ಅದಕ್ಕೆ ಬದಲಾಗಿ ಶರೀರವನ್ನು ನೋಡುವುದು, ಶರೀರದ ಪ್ರಪಂಚವನ್ನು ನೋಡುವುದು-ಯಥಾರ್ಥ ರೀತಿಯಾಗಿ ಕಾರ್ಯದಲ್ಲಿ ತೊಡಗಿಸಲು ಬಂದಿಲ್ಲ ಎಂದು ಇಂತಹವರಿಗೆ ಹೇಳಲಾಗುತ್ತದೆ. ಆದ್ದರಿಂದ ಈಗ ಸಮಯದ ಗತಿಯನ್ನು ತಿಳಿದುಕೊಳ್ಳುತ್ತಾ ಪರಿವರ್ತನಾ ಶಕ್ತಿಯನ್ನು ಸ್ವಯಂನ ಪ್ರತಿ ತೊಡಗಿಸಬೇಕು. ಸಮಯದ ಪರಿವರ್ತನೆಯನ್ನು ನೋಡಬಾರದು ಆದರೆ ಸ್ವಯಂನ ಪರಿವರ್ತನೆಯನ್ನು ನೋಡಿಕೊಳ್ಳಬೇಕು. ಸಮಯದ ಪರಿವರ್ತನೆಯ ನಿರೀಕ್ಷಣೆಯನ್ನು ಬಹಳ ಮಾಡುತ್ತೀರಿ, ಸ್ವಯಂನ ಪರಿವರ್ತನೆಗಾಗಿ ಕಡಿಮೆ ಯೋಚಿಸುತ್ತೀರಿ ಮತ್ತು ಇದಾಗಬೇಕು ಎಂದು ಸಮಯದ ಪರಿವರ್ತನೆಗಾಗಿ ಯೋಚಿಸುತ್ತೀರಿ. ಸ್ವಯಂ ರಚಯಿತರಾಗಿದ್ದೀರಿ, ಸಮಯವು ರಚನೆಯಾಗಿದೆ. **ರಚಯಿತ ಅರ್ಥಾತ್ ಸ್ವಯಂನ ಪರಿವರ್ತನೆಯಿಂದ ಆಗುವುದು, ರಚನೆ ಅರ್ಥಾತ್ ಸಮಯದ ಪರಿವರ್ತನೆಯಿಂದ ಆಗುವುದು.** ಪರಿವರ್ತನೆಗೆ ಆಧಾರ ಮೂರ್ತಿಗಳೂ ಸ್ವಯಂ ತಾವಾಗಿದ್ದೀರಿ. ಸಮಯದ ಸಮಾಪ್ತಿ ಅರ್ಥಾತ್ ಈ ಹಳೆಯ ಪ್ರಪಂಚದ ಪರಿವರ್ತನೆಯ ಗಡಿಯಾರವು ತಾವಾಗಿದ್ದೀರಿ. ಯಾವಾಗ ಈ ಗಡಿಯಾರವು ಸಮಾಪ್ತಿಯ ಸಮಯವನ್ನು ತೋರಿಸುತ್ತದೆ ಎಂದು ಇಡೀ ವಿಶ್ವದ ಆತ್ಮರಿಗೆ ತಾವು ಗಡಿಯಾರಗಳ ಮೇಲೆ ಮೇಲೆ ಕಣ್ಣಿದೆ. ತಮಗೆ ಗೊತ್ತಿದೆಯಲ್ಲವೆ ತಮ್ಮ ಗಡಿಯಾರದಲ್ಲಿ ಎಷ್ಟು ಗಂಟೆಯಾಗಿದೆ? ತಾವು ತಿಳಿಸುವವರಾಗಿದ್ದೀರಾ? ಕೇಳುವವರಾಗಿದ್ದೀರಾ? ಅಥವಾ ನಿರೀಕ್ಷಣೆಯಲ್ಲಿದ್ದೀರಾ? ಸಮಯವನ್ನು ತೋರಿಸುವವರು ಸಮಯದಗತಿಯ ಪ್ರತಿ ಹಲ್‌ಚಲ್ (ಏರುಪೇರು) ಆಗುವುದಿಲ್ಲವಲ್ಲವೆ? ಹಲ್‌ಚಲ್ ಇದೆಯೇ ಅಥವಾ ಅಚಲರಾಗಿದ್ದೀರಾ? ಏನಾಗುತ್ತದೆಯೋ, ಯಾವಾಗ ಆಗುತ್ತದೆಯೋ, ಆಗುತ್ತದೆಯೇ ಅಥವಾ ಇಲ್ಲವೆ, ಡ್ರಾಮಾನುಸಾರ ಸಮಯ-ಪ್ರತಿ ಸಮಯದಲ್ಲಿ ಅಲುಗಾಡಿಸುವ ಪರೀಕ್ಷೆಗಳು ಬರುತ್ತಿರುತ್ತವೆ ಮತ್ತು ಬರಲೇಬೇಕು.

ಹೇಗೆ ವೃಕ್ಷವನ್ನು ಅಲುಗಾಡಿಸಲಾಗುತ್ತದೆಯಲ್ಲವೆ. ಅಂದಮೇಲೆ ನಿಶ್ಚಯದ ತಳಪಾಯ ಅರ್ಥಾತ್ ಬುನಾದಿಯನ್ನು ಅಲುಗಾಡಿಸುವ ಪರೀಕ್ಷೆಗಳೂ ಬರುತ್ತವೆ ನಂತರ ಪರೀಕ್ಷೆಯನ್ನು ತೆಗೆದುಕೊಳ್ಳಲು ತಯಾರಾಗಿದ್ದೀರಾ ಅಥವಾ ಬಲಹೀನರಾಗಿದ್ದೀರಾ? ಪಾಂಡವಸೇನೆಯು ತಯಾರಾಗಿದ್ದೀರಾ ಅಥವಾ ಶಕ್ತಿಯರು ತಯಾರಾಗಿದ್ದೀರಾ ಅಥವಾ ಇಬ್ಬರೂ ತಯಾರಾಗಿದ್ದೀರಾ? ಬುದ್ಧಿವಂತ ವಿದ್ಯಾರ್ಥಿಯು ಪರೀಕ್ಷೆಯನ್ನು ಆಹ್ವಾನ ಮಾಡುತ್ತಾರೆ ಮತ್ತು ಬಲಹೀನರು ಭಯಪಡುತ್ತಾರೆ. ಅಂದಮೇಲೆ ತಾವು ಯಾರಾಗಿದ್ದೀರಿ? ನಿಶ್ಚಯಬುದ್ಧಿಯವರ ಚಿಹ್ನೆಯಾಗಿದೆ. ಅವರು ಪ್ರತಿಯೊಂದು ಮಾತಿನ ಹಾಗೂ ಪ್ರತಿಯೊಂದು ದೃಶ್ಯವನ್ನು ನಿಶ್ಚಿತವೆಂದು ತಿಳಿದು ಸದಾ ನಿಶ್ಚಿಂತರಾಗಿರುತ್ತಾರೆ. ಏಕೆ, ಏನು ಮತ್ತು ಹೇಗಾಗುತ್ತದೆ ಎಂದು ಚಿಂತಿಸುವುದಿಲ್ಲ. ಫರಿಶ್ತೆಯ ಅಂತಿಮ ಸ್ಥಿತಿಯ ಚಿಹ್ನೆಯಾಗಿದೆ, ಸದಾ

ಶುಭಚಿಂತಕ ಮತ್ತು ಸದಾ ನಿಶ್ಚಿಂತರಾಗಿರುವುದು- ಈ ರೀತಿ ಆಗಿದ್ದೀರಾ? ಅನುಭವದ ಕೋರ್ಸ್‌ನಲ್ಲಿ ಸ್ವಯಂನ್ನು ಅನುಭವ ಮಾಡಿರಿ ಮತ್ತು ಈಗ ಅಂತ್ಯದ ಸ್ವಲ್ಪ ಪುರುಷಾರ್ಥದ ಸಮಯದಲ್ಲಿ ಸ್ವಯಂನಲ್ಲಿ ಸರ್ವಶಕ್ತಿಗಳನ್ನು ಪ್ರತ್ಯಕ್ಷ ಮಾಡಬೇಕಾಗಿದೆ. ಪ್ರತ್ಯಕ್ಷತೆಯ ವರ್ಷವನ್ನು ಆಚರಿಸುತ್ತೀರಲ್ಲವೆ? ತಂದೆಯನ್ನು ಪ್ರತ್ಯಕ್ಷ ಮಾಡುವುದಕ್ಕೆ ಮೊದಲು ಸ್ವಯಂನಲ್ಲಿ ಇವೆಲ್ಲಾ ಮಾತುಗಳ ಪ್ರತ್ಯಕ್ಷತೆಯನ್ನು ಮಾಡಿದಾಗ ತಂದೆಯನ್ನು ಪ್ರತ್ಯಕ್ಷ ಮಾಡಲು ಸಾಧ್ಯವಾಗುತ್ತದೆ. ಈ ವರ್ಷವನ್ನು ವಿಶೇಷವಾಗಿ ಜ್ವಾಲಾಸ್ವರೂಪ ಅರ್ಥಾತ್ ಲೈಟ್‌ಹೌಸ್ ಮತ್ತು ಮೈಟ್ ಹೌಸ್ ಸ್ಥಿತಿಯನ್ನು ತಿಳಿದುಕೊಳ್ಳುತ್ತಾ ಇದೇ ಪುರುಷಾರ್ಥದಲ್ಲಿರಿ. ವಿಶೇಷವಾಗಿ ನೆನಪಿನ ಯಾತ್ರೆಯನ್ನು ಶಕ್ತಿಶಾಲಿ ಮಾಡಿಕೊಳ್ಳಿ, ಜ್ಞಾನಸ್ವರೂಪದ ಅನುಭವಿಯಾಗಿರಿ. ಈ ರೀತಿ ಸ್ವಯಂನ ಉನ್ನತಿಯಲ್ಲಿ ವಿಶೇಷವಾಗಿ ಕಾರ್ಯಕ್ರಮಗಳನ್ನು ತಯಾರು ಮಾಡಿಕೊಳ್ಳ ಬೇಕು. ನಿಮ್ಮ ಮೂಲಕ ತಾವು ಶ್ರೇಷ್ಠಾತ್ಮರ ಶುಭವೃತ್ತಿ ಹಾಗೂ ಕಲ್ಯಾಣದ ವೃತ್ತಿ ಮತ್ತು ಶಕ್ತಿಶಾಲಿ ವಾತಾವರಣದ ಮೂಲಕ ಚಡಪಡಿಸುತ್ತಿರುವ ಅನೇಕ ಆತ್ಮರಿಗೆ, ಅಲೆಯುತ್ತಿರುವವರಿಗೆ, ಕೂಗುತ್ತಿರುವ ಆತ್ಮರಿಗೆ ಆನಂದ, ಶಾಂತಿ ಮತ್ತು ಶಕ್ತಿಯ ಅನುಭೂತಿಯಾಗಲಿ, ತಿಳಿಯಿತೆ - ಈಗ ಏನು ಮಾಡಬೇಕಾಗಿದೆ? ಕೇವಲ ತಿಳಿಸುವುದಲ್ಲ, ಅನುಭವವನ್ನು ಮಾಡಿಸಬೇಕಾ ಗಿದೆ. ಅನುಭವವನ್ನು ಮಾಡಿಸುವುದಕ್ಕಾಗಿ ಮೊದಲು ಸ್ವಯಂ ಅನುಭವೀ ಮೂರ್ತಿಯಾಗಿರಿ. ಸ್ವಯಂನ್ನು ಪರಿವರ್ತನೆ ಮಾಡಿ ವಿಶ್ವವನ್ನು ಪರಿವರ್ತನೆ ಮಾಡಲೇಬೇಕಾಗಿದೆ ಎಂದು ಈ ವರ್ಷದಲ್ಲಿ ವಿಶೇಷವಾಗಿ ಸಂಕಲ್ಪವನ್ನು ತೆಗೆದುಕೊಳ್ಳಬೇಕು. ತಿಳಿಯಿತೆ? ಧೃಡಸಂಕಲ್ಪದ ಫಲಿತಾಂಶವು ಸದಾ ಸಫಲತೆಯದೇ ಆಗಿದೆ. ಒಳ್ಳೆಯದು-

**ಇಂತಹ ಧೃಡಸಂಕಲ್ಪದ ಮೂಲಕ ಸೃಷ್ಟಿಯ ನವ ನಿರ್ಮಾಣ ಮಾಡುವಂತಹ, ತಮ್ಮ ಆತ್ಮಿಕ ವೃತ್ತಿಯ ಮೂಲಕ ವಾಯುಮಂಡಲವನ್ನು ಪರಿವರ್ತನೆ ಮಾಡುವಂತಹ, ಪ್ರತಿಯೊಂದು ಆತ್ಮನಿಗೆ ಸುಖ, ಶಾಂತಿ ಹಾಗೂ ಶಕ್ತಿಯ ಹನಿಯನ್ನು ಹಾಗೂ ವರದಾನವನ್ನು ಕೊಟ್ಟು ತೃಪ್ತ ಆತ್ಮನನ್ನಾಗಿ ಮಾಡುವಂತಹ, ಜನ್ಮ-ಜನ್ಮಾಂತರದಿಂದ ಬಾಯಾರಿರುವ ಆತ್ಮರ ಬಾಯಾರಿಕೆಯನ್ನು ನೀಗಿಸುವಂತಹ, ಸರ್ವರನ್ನು ತಮ್ಮ ನೆಲೆಯಲ್ಲಿ ಕೂರಿಸುವಂತಹ, ಸದಾ ನಿಶ್ಚಯಬುದ್ಧಿ ಮಕ್ಕಳಿಗೆ, ಹಲ್‌ಚಲ್‌ನಲ್ಲಿಯೂ ಅಚಲರಾಗಿರುವಂತಹ, ಜ್ಞಾನಸ್ವರೂಪ ಹಾಗೂ ಸ್ಮೃತಿ ಸ್ವರೂಪ ಆತ್ಮರಿಗೆ ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 07-02-1976.

***ಅವ್ಯಕ್ತ ಫರಿಶ್ತೆಗಳ ಸಭೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನಾನು ಕಂಬೈನ್ಡ್ ಸ್ವರೂಪ.

1. ನಾನು ಸದಾ ಹರ್ಷಿತ, ಸದಾ ಅಲ್ಪಕಾಲದ ಆಕರ್ಷಣೆಗಳಿಂದ ದೂರವಿರುವ ಅವ್ಯಕ್ತಫರಿಶ್ತಾ.

2. ನಾನು ಪ್ರಕಾಶ ಸ್ವರೂಪ (ಲೈಟ್ ಹೌಸ್) ಮತ್ತು ಶಕ್ತಿ ಸ್ವರೂಪ (ಮೈಟ್ ಹೌಸ್).

3. ನಾನು ಭವಿಷ್ಯ ಸ್ವರ್ಗ ಪ್ರಪಂಚದಲ್ಲಿ ದೇವತಾ ಸ್ವರೂಪ, ವರ್ತಮಾನದಲ್ಲಿ ಫರಿಶ್ತಾ ಸ್ವರೂಪ.

4. ನಾನು ಹಳೆಯ ದೇಹ ಮತ್ತು ಹಳೆಯ ಪ್ರಪಂಚದ ಸ್ಮೃತಿಯಲ್ಲಿ ಪರಿವರ್ತನೆಯಾಗಿರುವ ಅವ್ಯಕ್ತ ಪರಿಶ್ತಾ.

5. ನಾನು ತಂದೆಯ ಮೂರು ರೂಪಗಳ (ಸಾಕಾರ, ಆಕಾರ ಮತ್ತು ನಿರಾಕಾರ) ಆಧಾರದಿಂದ ಪಡೆದ ಪಾಲನೆ ಮತ್ತು ಓದಿಗೆ ಬದಲಾಗಿ ಅವ್ಯಕ್ತ ಸ್ಥಿತಿಯಲ್ಲಿ ವಿಶ್ವ ಸೇವೆಯನ್ನು ಮಾಡುತ್ತಿದ್ದೇನೆ.

6. ಈಶ್ವರೀಯ ವಿದ್ಯಾರ್ಥಿಯಾಗಿ ನಾನು ನಾಲ್ಕು ಸಬ್ಜೆಕ್ಟ್ ಗಳಲ್ಲಿ ಸಂಪನ್ನವಾಗಿ ಇದ್ದೇನೆ. ಅರ್ಥಾತ್ 16 ಕಲಾ ಸಂಪೂರ್ಣವಾಗಿ, ಸರ್ವ ಗುಣ ಸಂಪನ್ನವಾಗಿ, ಮರ್ಯಾದ ಪುರುಷೋತ್ತಮನಾಗಿ, ಸಂಪೂರ್ಣ ಅಹಿಂಸಕನಾಗಿ ಇದ್ದೇನೆ.

7. ನಾನು ಎಲ್ಲಾ ಮರ್ಯಾದೆಗಳನ್ನು ಧಾರಣೆ ಮಾಡಿರುವ ಮರ್ಯಾದ ಪುರುಷೋತ್ತಮನು.

8. ನಾನು ಸಂಕಲ್ಪದಿಂದಲೂ ಯಾವುದೇ ಆತ್ಮನಿಗೆ ದುಃಖವನ್ನು ಕೊಡು-ತೆಗೆದುಕೊಳ್ಳದ ಸಂಪೂರ್ಣ ಅಹಿಂಸಕನು.

9. ನನ್ನ ಪ್ರತಿ ಸಂಕಲ್ಪ, ಪ್ರತಿಹೆಜ್ಜೆ ಉತ್ತಮವಾಗಿ ಅರ್ಥಾತ್ ಶ್ರೇಷ್ಠವಾಗಿರುವ ಸಂಪೂರ್ಣ ಅಹಿಂಸಕನು.

10. ನಾನು ನನಗೆ ವರದಾನಗಳ ರೂಪದಲ್ಲಿ ಕೊಟ್ಟಿರುವ ಮೂರನೇ ನೇತ್ರದಿಂದ ಆತ್ಮನನ್ನು, ಆತ್ಮಿಕ ಪ್ರಪಂಚವನ್ನು ಹೊಸ ಪ್ರಪಂಚವನ್ನು ನೋಡುತ್ತಿದ್ದೇನೆ.

11. ನಾನು ಸಮಯದ ಗತಿಯನ್ನು ತಿಳಿದುಕೊಂಡು ಸ್ವಯಂನ್ನು ಪರಿಶೀಲಿಸಿಕೊಂಡು ಪರಿವರ್ತನಾ ಶಕ್ತಿಯನ್ನು ಸ್ವಯಂನ ಪ್ರತಿ ಉಪಯೋಗಿಸಿ ಸಂಪನ್ನವಾಗಿ ಇದ್ದೇನೆ.

12. ನಾನು ಮಾಸ್ಟರ್ ರಚಯಿತನು ಸಮಯ ನನ್ನ ರಚನೆ.

13. ನಾನು ವಿಶ್ವ ಪರಿವರ್ತನೆಗೆ ಆಧಾರ ಮೂರ್ತಿ.

14. ನಾನು ಪರೀಕ್ಷೆಯನ್ನು ಆಹ್ವಾನಿಸುವ ಬುದ್ದಿವಂತ, ನಿಶ್ಚಯ ಬುದ್ಧಿಯುಳ್ಳ, ನಿಶ್ಚಿಂತ ಸ್ವರೂಪ.

15. ನಾನು ಏಕೆ, ಏನು ಮತ್ತು ಹೇಗೆ ಎಂದು ಚಿಂತಿಸದ ಶುಭ ಚಿಂತಕ, ಸದಾ ನಿಶ್ಚಿಂತ ಅವ್ಯಕ್ತ ಫರಿಶ್ತಾ.

16. ನಾನು ಜ್ಞಾನ ಸ್ವರೂಪದ ಅನುಭವಿ ಆಗಿದ್ದೇನೆ.

17. ನನ್ನ ಶುಭ ವೃತ್ತಿಯಿಂದ ಅಥವಾ ಕಲ್ಯಾಣಕಾರಿ ವೃತ್ತಿ ಮತ್ತು ಶಕ್ತಿಶಾಲಿ ವಾತಾವರಣದಿಂದ ಅಲೆಯುತ್ತಿರುವ, ಕೂಗುತ್ತಿರುವ, ಚಡಪಡಿಸುತ್ತಿರುವವರಿಗೆ ಆನಂದ, ಶಾಂತಿ ಮತ್ತು ಶಕ್ತಿಯ ಅನುಭವವನ್ನು ಮಾಡಿಸಿದ್ದೇನೆ.